**ದಿನಾಂಕಃ 13/02/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು:** ವಾದಿ ಪರ ಶ್ರೀ. ಎಸ್.ಎಂ.ಪಿ.,**ವಕೀಲರಿಂದಃ**

1. ಈ ದಿನದಿಂದ 40 ವ ರ್ಷಗಳ ಹಿಂದೆ ನನಗೆ 5 ವರ್ಷ ವಯಸ್ಸಾಗಿತ್ತು. ಆಗ ನನಗೆ ಪ್ರಾಪಂಚಿಕ ಜ್ಞಾನ ಇರಲ್ಲಿಲ್ಲ ಎಂದರೆ ಸರಿ. 40 ವರ್ಷಗಳ ಹಿಂದೆ ಕಾಡನಾಯಕರ ಸಂಸಾರದಲ್ಲಿ ಏನೇನು ವ್ಯವಹಾರಗಳು ಆಗಿದೆ ಎಂದು ಸ್ವಲ್ಪ ಗೊತ್ತು. 40 ವರ್ಷಗಳ ಹಿಂದೆ ಕಾಡು ನಾಯಕರು ಬದುಕಿರಲ್ಲಿಲ್ಲ. ಕಾಡುನಾಯಕರ ಹೆಂಡತಿಯ ಹೆಸರು ಸೂರಮ್ಮ ಎಂದರೆ ಸರಿಯಲ್ಲ. ಕಾಡು ನಾಯಕರ ಹೆಂಡತಿಯ ಹೆಸರು ಗುಂಡಮ್ಮ. ಕಾಡುನಾಯಕರ ಹೆಂಡತಿಯ ಹೆಸರು ಸೂರಮ್ಮ ಅಲ್ಲ ಗುಂಡಮ್ಮ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಕಾಡುನಾಯಕರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಕಾಡುನಾಯಕರು ಯಾವಾಗ ಮಸಿಣವನ್ನು ಹೊಂದಿದರು ಎಂದು ಗೊತ್ತಿಲ್ಲ.

2. ನಾನು ಹುಟ್ಟಿದ್ದಾಗ ಮಲ್ಲನಾಯಕರು ಮರಣವನ್ನು ಹೊಂದಿದ್ದರು. ಕೆ.ಸಣ್ಣಪ್ಪನಾಯಕರು ಯಾರು ಎಂದು ನನಗೆ ಗೊತ್ತಿಲ್ಲ. ಈ ದಿನ ನ್ಯಾಯಾಲಯದ ಮುಂದಿರುವ ವಾದಿ ಯಾರು ಎಂದು ನನಗೆ ಗೊತ್ತಿಲ್ಲ. ವಾದಿಯ ತಂದೆಯ ಹೆಸರು ನನಗೆ ಗೊತ್ತಿಲ್ಲ. ಈ ದಾವೆಯನ್ನು ಹಾಕಿದ ನಂತರ ನಾನು ವಾದಿಯವರು ಇತಿಹಾಸದ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸಿಲ್ಲ. ನಾನು ಜನಿಸುವ ಮುನ್ನ ಕೆ.ಸಣ್ಣಪ್ಪ ನಾಯಕರು ನಿಲವಾಡಿ ಗ್ರಾಮವನ್ನು ಬಿಟ್ಟು ತೆಲಗಿನಕುಪ್ಪೆ ಗ್ರಾಮಕ್ಕೆ ಬಂದು ಸೇರಿದರು ಎಂದರೆ ಸರಿಯಲ್ಲ. ನಾನು ಈ ದಾವೆಯನ್ನು ಹೂಡಿದ ನಂತರ ಕೆ.ಸಣ್ಣಪ್ಪನಾಯಕರು ಎಂಬುವರು ಯಾರಾದರೂ ಇದ್ದಾರಾ ಎಂದು ಕೇಳಿದೆ ಅದಕ್ಕೆ ಅವರು ಇಲ್ಲ ಎಂದು ನುಡಿಯುದಿದ್ದರು. ಆದ್ದರಿಂದ ಅವರು ತೆಲಗಿನಕುಪ್ಪೆ ಗ್ರಾಮಕ್ಕೆ ಬಂದು ಸೇರಿಲ್ಲ ಎಂದು ತಿಳಿಸುತ್ತಿದ್ದೇನೆ ಎಂದು ನುಡಿಯುತ್ತಾರೆ.

3. ದಾವಾ ಸ್ವತ್ತುಗಳು ಮೂಲತಃ ನನ್ನ ತಾತ ಮಲ್ಲಯ್ಯ ನವರಿಗೆ ಸೇರಿದ್ದು. ಕೆಲವೊಬ್ಬರು ಮಲ್ಲಯ್ಯ ಮತ್ತು ಮಲ್ಲನಾಯಕರು ಎಂದು ಎರಡು ಹೆಸರುಗಳಿಂದ ನನ್ನ ತಾತನನ್ನು ಕರೆಯುತ್ತಿದ್ದರು. ವಾದಿಯ ಹೆಸರು ನನಗ ಗೊತ್ತಿಲ್ಲ. ವಾದಿಯವರು ಜಮೀನಿನಲ್ಲಿ ಭಾಗವನ್ನು ಕೋರಿ ಈ ದಾವೆಯನ್ನು ಹೂಡಿದ್ದಾರೆ ಎಂದು ವಕೀಲರ ಮುಖಾಂತರ ಗೊತ್ತಾಯಿತು. ಕಾಡುನಾಯಕರವರಿಗೆ ಮಲ್ಲಯ್ಯ ಅಲಿಯಾಸ ಮಲ್ಲನಾಯಕ ಮತ್ತು ಸಣ್ಣಪ್ಪ ನಾಯಕ ಎಂಬ ಇಬ್ಬರು ಮಕ್ಕಳಿದ್ದರು ಎಂದರೆ, ಸಾಕ್ಷಿಯು ಮಲ್ಲಯ್ಯ ಎಂಬ ಮಗ ಇದ್ದರು ಆದರೆ ಸಣ್ಣಪ್ಪನಾಯಕ ಎಂಬ ಮಗ ಇಲ್ಲ ಎಂದು ನುಡಿಯುತ್ತಾರೆ. ಸಣ್ಣಪ್ಪ ನಾಯಕರ ಹೆಂಡತಿಯ ಹೆಸರು ಪುಟ್ಟಮ್ಮ ಎಂದರೆ ಸರಿಯಲ್ಲ. ವಾದಿಯು ಕೆ.ಸಣ್ಣಪ್ಪ ನಾಯಕ ಮತ್ತು ಪುಟ್ಟಮ್ಮ ರವರ ಮಗ ಎಂದರೆ ನನಗೆ ಗೊತ್ತಿಲ್ಲ.

(ಮುಂದುವರೆದ ಪಾಟೀಸವಾಲನ್ನು ಪ್ರತಿವಾದಿಯ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು)

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**